**AKSHARASURYA**
Peer-Reviewed, Multi Lingual E-Journal
Volume – 01, Issue – 02, November 2022.

# ಕುವೆಂಪು ಅವರ ವೈಚಾರಿಕತೆ

**ಡಾ. ಪುಟ್ಟಸ್ವಾಮಿ**
ಪ್ರಾಧ್ಯಾಪಕರು
ಸ್ನಾತಕೋತ್ತರ ಕೇಂದ್ರ
ಹೇಮಗಂಗೋತ್ರಿ, ಹಾಸನ.
puttaswamyuom@gmail.com
9380418334

ಕನ್ನಡ ಸಾಹಿತ್ಯ ಸಂದರ್ಭದಲ್ಲಿ 'ಕುವೆಂಪು' ಎನ್ನುವ ಹೆಸರೇ ಒಂದು ವಿಶಿಷ್ಟವಾದ ಕಂಪನ್ನ, ಸೊಂಪನ್ನ ಒಳಗೊಂಡಿದೆ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃಷಿ ಮಾಡಿರುವ ಇವರು ಸೀಮಾಪುರುಷರೆನಿಸಿಕೊಂಡಿದ್ದಾರೆ. ಮುಖ್ಯವಾಗಿ ಅವರ ವೈಚಾರಿಕ ನಿಲುವು ವೈಜ್ಞಾನಿಕ ದೃಷ್ಟಿಯಿಂದ ಪ್ರೇರಿತವಾದದ್ದು. ವೈಚಾರಿಕತೆ ಎಂಬುದು ಬುದ್ಧಿ ಮತ್ತು ಭಾವಗಳ ವಿದ್ಯುದಾಲಿಂಗನ. ಸೂಕ್ಷ್ಮವಾದ ವಿವೇಚನಾಶಕ್ತಿ, ಆಲೋಚನಾಶಕ್ತಿಗಳ ಅಭಿವ್ಯಕ್ತಿಯ ಸಂಗಮ. ವಿವೇಕಪೂರ್ಣವಾದ ವಿವೇಚನೆಯೇ ವೈಚಾರಿಕತೆಯ ತಳಹದಿಯಾಗಿದೆ. ವೈಚಾರಿಕತೆ ಎಂಬುದು ಮೂಲಭೂತ ಮೌಲ್ಯಗಳನ್ನು ನಿರಾಕರಿಸಬಾರದು. ಸತ್ಯವನ್ನು ಶೋಧಿಸುವಾಗ ಭೌತಿಕವಾಗಿ ಕಣ್ಣಿಗೆ ಕಾಣುವ ವಸ್ತುವಿನ ವೈಜ್ಞಾನಿಕ ದೃಷ್ಟಿಯೊಂದೆ ನಿಜವಾಗಲಾರದು. ಅದರ ಜೊತೆಗೆ ಆ ವಸ್ತುವಿನ ಅಂತರಾಳದ ಚೈತನ್ಯಾತ್ಮಕ ಭಾವಲಹರಿಯು ಕೂಡ ಮುಖ್ಯವಾಗುತ್ತದೆ. ಇದನ್ನು ಹಿನ್ನೆಲೆಯಾಗಿಟ್ಟುಕೊಂಡು ಕುವೆಂಪು ವೈಚಾರಿಕ ಪ್ರಜ್ಞೆಯ ಆಶಯವನ್ನು ನಾಡು, ನುಡಿ, ಸಮಾಜ, ವೃತ್ತಿ, ದೇವರು, ಧರ್ಮ ಮೊದಲಾದ ಚಿಂತನೆಗಳ ಮೂಲಕ ತಿಳಿಯಬೇಕಾಗುತ್ತದೆ.

ಕುವೆಂಪು ಕನ್ನಡ ಮತ್ತು ಕರ್ನಾಟಕದ ಒಂದು ಶಕ್ತಿ ಮತ್ತು ಚೇತನ. ಚಾರಿತ್ರಿಕವಾದ ನಿಸರ್ಗ ನ್ಯಾಯ ಪ್ರತಿಪಾದನೆಗೆ ವಸ್ತುನಿಷ್ಠವಾದ ವ್ಯಾಖ್ಯಾನ ನೀಡಿದ ಚಿಂತಕ. ಮನುಷ್ಯ ಅಲ್ಪಮಾನವತೆಯನ್ನು ದಾಟಿ ವಿಶ್ವಮಾನವನಾಗಬೇಕೆಂಬ ಕನಸಿನ ಆದಿಗೊಂದು ಹೊಸ ರೂಪವನ್ನೇ ನೀಡಲು ಹಂಬಲಿಸಿದವರು. ಅವರು ಈ ನೆಲದ ಸಾಮಾಜಿಕ ನ್ಯಾಯದ ಮಹತ್ವದ ವಿಶಿಷ್ಟ ಪರಿಕಲ್ಪನೆಯ ಒಬ್ಬ ಮಹಾನ್ ವೈಚಾರಿಕ ಚಿಂತಕನಾಗಿಯೂ ಹಾಗೂ ಒಂದು ಯುಗದ ಯುಗಶಕ್ತಿಯಾಗಿಯೂ ನಿಲ್ಲುತ್ತಾರೆ.

ಕುವೆಂಪು ಅವರ ಎಲ್ಲಾ ಬರವಣಿಗೆಯಲ್ಲಿ ನಿಜದ ನೆಲೆಯ ದರ್ಶನವಿದೆ. ಅದು ನೆನ್ನೆಗಳನ್ನು ನೋಡುತ್ತಲೇ ನಾಳೆಗೂ ಚಿಂತಿಸಬಹುದಾದ ಇಂದಿನ ವಾಸ್ತವವನ್ನು ಕುರಿತು ಎಚ್. ತಿಪ್ಪೇರುದ್ರಸ್ವಾಮಿ ಅವರು 'ಕುವೆಂಪು ಅವರ ವೈಚಾರಿಕತೆ' ಎನ್ನುವ ಈ ಕೃತಿಯಲ್ಲಿ ಮುಖ್ಯವಾಗಿ ಕುವೆಂಪು ಅವರ ಭಾಷಣ, ಲೇಖನ ಮತ್ತು ಲೇಖನ ವಿಚಾರಶೀಲತೆಯ ಎಳೆಗಳನ್ನು ಹಿಂಜಿ ನೋಡುವ ಉದ್ದೇಶ ನನ್ನದು ಎಂದಿದ್ದಾರೆ. ಇದು ಅವರ ಸಾಹಿತ್ಯ ಕೃತಿಗಳ ವಿಶ್ಲೇಷಣೆ ಅಥವಾ ವಿಮರ್ಶೆಯಲ್ಲ ಎಂಬುದನ್ನು ವಿನಮ್ರವಾಗಿ ತಿಳಿಸಿದ್ದಾರೆ. ಅದರಲ್ಲೂ ಚರ್ಚೆಗೆ ಸಾಮಾಜಿಕವಾದ ಮತ್ತು ಸಮಷ್ಟಿ ಜಾಗೃತಿಗೆ ಕಾರಣವಾಗುವ ಅವರ ತತ್ವಬದ್ಧತೆಯ

ವಿಚಾರ ನಿಷ್ಠೆಯನ್ನು ಪ್ರಧಾನವಾಗಿ ಪರಿಗಣಿಸಿ ಪ್ರಾಸಂಗಿಕವಾಗಿ – ಯುಗಶಕ್ತಿ, ವೈಚಾರಿಕ ದೃಷ್ಟಿ, ನಾಡು–ನುಡಿ, ಶಿಕ್ಷಣ : ಸರ್ವೋದಯ, ಸರ್ವರಿಗೂ ಸಮಬಾಳು, ವಿಚಾರಕ್ರಾಂತಿ, ಪರಿಸರ ಪ್ರಭೆ, ಮತ–ಧರ್ಮ, ಧರ್ಮ – ಆಧ್ಯಾತ್ಮ – ಸಾಹಿತ್ಯ, ವಿಶ್ವಮಾನವ ದೃಷ್ಟಿಯ ವೈಚಾರಿಕ ವಿಕಾಸವನ್ನು ಗುರುತಿಸುವ ಪ್ರಯತ್ನ ಇಲ್ಲಿಯದು ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಕುವೆಂಪು ಅವರನ್ನು 'ಕವಿ' ಎಂದು ಒಪ್ಪಿಕೊಂಡರೂ, ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ, ಅಂದರೆ – ಕಥೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, ಮೀಮಾಂಸೆ, ಮಕ್ಕಳ ಸಾಹಿತ್ಯ – ಎಲ್ಲಾ ಪ್ರಕಾರಗಳಲ್ಲೂ ಅವರ ಸಾಧನೆ ಆಶ್ಚರ್ಯ ಬೆರಗು ಮೂಡಿಸುವಂತದ್ದು. ಈ ಎಲ್ಲಾ ಪ್ರಕಾರಗಳಲ್ಲೂ ಬರೆದವರು ಅನೇಕರಿರಬಹುದು. ಆದರೆ ಆ ಎಲ್ಲವುಗಳಲ್ಲೂ ಕುವೆಂಪು ಅವರಂತೆ ಸಿದ್ಧಿಯನ್ನು ಪಡೆದವರಿಲ್ಲ ಎಂದು ಒಬ್ಬ ವಿಮರ್ಶಕರು ಹೇಳಿರುವ ಮಾತು ಸತ್ಯಕ್ಕೆ ಹತ್ತಿರವಾದ ಮಾತು ಹಾಗೂ ವಾಸ್ತವದಿಂದ ಕೂಡಿರುವಂತದ್ದು. ಅವರು ಯಾವುದನ್ನೂ ಕೈಗೆತ್ತಿಕೊಂಡರೂ ತಮ್ಮ ವಿಶಿಷ್ಟ ಶಕ್ತಿ ಸ್ಪರ್ಶದಿಂದ ಅದಕ್ಕೊಂದು ಹೊಸತನವನ್ನು ತಂದುಕೊಡುವುದರಲ್ಲಿ ಸಿದ್ಧ ಹಸ್ತರು ಎಂಬುದು ಎಚ್. ತಿಪ್ಪೇರುದ್ರಸ್ವಾಮಿಯವರ ಅಭಿಮತ.

ಅನೇಕ ಸಾಧಕರಿಗೆ, ಪ್ರತಿಭೆಗಳಿಗೆ ತಕ್ಕ ಪುರಸ್ಕಾರ ಎಲ್ಲ ಸಂದರ್ಭಗಳಲ್ಲೂ ದೊರೆಯುತ್ತದೆ ಎಂಬುದನ್ನು ಹೇಳಲಾಗದು. ಆದರೆ ಕುವೆಂಪು ಅವರಿಗೆ ಎಲ್ಲ ಪ್ರಶಸ್ತಿ, ಪ್ರಸಿದ್ಧಿ, ಅಧಿಕಾರ ಎಲ್ಲವೂ ಅವರನ್ನು ಅರಸಿಕೊಂಡು ಬಂದವು. ಅವುಗಳಿಗಾಗಿ ಎಂದೂ ಹಾತೊರೆಯಲಿಲ್ಲ; ಯಾರ ಬಳಿಯೂ ಶಿಫಾರಸ್ಸು ಮಾಡಿಸಿದವರಲ್ಲ. ಯಾರಿಗೂ ತಲೆಬಾಗದ ದಿಟ್ಟತನದ ಆತ್ಮಾಭಿಮಾನಿ, ಅದಕ್ಕಿಂತ ಹೆಚ್ಚಾಗಿ ಸ್ವಾಭಿಮಾನಿ.

ಜೀವನದ ಉದ್ದಕ್ಕೂ ಕುವೆಂಪು ಅವರು ತಮ್ಮ ಉದಾತ್ತವಾದ ನಿಲುವಿನಿಂದ ಕೆಳಗಿಳಿಯಲಿಲ್ಲ. ಯಾರಿಗೂ ತಲೆಬಾಗದೆ, ಕೀರ್ತಿಯನ್ನು 'ಶನಿ' ಎಂದು ಕರೆದು ಅದನ್ನು ದೂರೀಕರಿಸಿದರು. ಆದರೂ 'ಕೀರ್ತಿಶನಿ'ಯೇ ಅವರಿಗೆ ಮಣಿದು 'ಯಶೋಲಕ್ಷ್ಮಿ'ಯಾಗಿ ಅವರ ಬೆನ್ನು ಹತ್ತಿತ್ತು. ತಮ್ಮ ವೈವಿಧ್ಯಪೂರ್ಣ ಬರಹಗಳಿಂದ ಕನ್ನಡ ಸಾಹಿತ್ಯದ ದಿಗಂತವನ್ನು ವಿಸ್ತರಿಸಿ ಲೌಕಿಕ ಜೀವನದಲ್ಲಿಯೂ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಕೊನೆಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳ ಸ್ಥಾನವನ್ನು ಅಲಂಕರಿಸಿದವರು.

ಸಾಹಿತ್ಯಲೋಕದಲ್ಲಿ ತಮ್ಮ ವಿಶಿಷ್ಟ ಕೃತಿಗಳಿಂದ ಕುವೆಂಪು ಯುಗವನ್ನೇ ಸೃಷ್ಟಿಸಿದರು. ಹಾಗೆಯೇ ಲೌಕಿಕ ಸ್ತರದಲ್ಲಿಯೂ ಅವರು ಮಾಡಿದ ಕೆಲಸ ವಿಶಿಷ್ಟವಾದವು. ಮಹಾರಾಜ ಕಾಲೇಜಿನಲ್ಲಿದ್ದ ಸ್ನಾತಕೋತ್ತರ ಕೇಂದ್ರವನ್ನು ನೂತನ ಪರಿಸರಕ್ಕೆ ಬದಲಾಯಿಸಿದ್ದಲ್ಲದೆ, ಆ ಕ್ಷೇತ್ರಕ್ಕೆ ಅತಿ ವಿಶಿಷ್ಟವಾದ 'ಮಾನಸಗಂಗೋತ್ರಿ' ಎಂಬ ಹೆಸರನ್ನು ನಾಮಕರಣ ಮಾಡಿದರು. ಆ ಸಂದರ್ಭದಲ್ಲಿ ಕೆಲವರು ಗೇಲಿ ಮಾಡಿದ್ದೂ ಉಂಟು:

ಆದರೆ ಕೆಲ ಸಮಯಕ್ಕೆ ಆ ಹೆಸರು ಜನಮೆಚ್ಚುಗೆ ಪಡೆದು, ಆ ಹೆಸರಿನ ಅನುಕರಣೆ ಹಲವಾರು ಕಡೆ ಪ್ರತಿಧ್ವನಿಸುವಂತಾಯಿತು. ಹೀಗೆ ಕುವೆಂಪು ಸ್ಪರ್ಶವನ್ನು ಪಡೆದ ವಿಶ್ವವಿದ್ಯಾನಿಲಯ ಪ್ರತಿಭೆಗಳನ್ನು ರೂಪಿಸುವ ದೇಗುಲವಾಯಿತು. ಕುವೆಂಪು ಯುಗದ ಶಕ್ತಿಯಾದರು.

ಕುವೆಂಪು ಅವರ ವೈಚಾರಿಕ ನಿಲುವು ನೇರವಾದದ್ದು, ಖಚಿತವಾದದ್ದು, ಪೂರ್ಣದೃಷ್ಟಿ ಸಮನ್ವಿತವಾದದ್ದು. ಮುಖ್ಯವಾಗಿ ಅವರ ವೈಚಾರಿಕ ಪ್ರಜ್ಞೆ ವೈಜ್ಞಾನಿಕ ದೃಷ್ಟಿಯಿಂದ ಪ್ರೇರಿತವಾದದ್ದು; ಪೋಷಿತವಾದದ್ದು. ಮೂಢನಂಬಿಕೆಗಳನ್ನು ಕಿತ್ತೆಸೆದು ಮನುಜಮತವನ್ನು ಪ್ರತಿಪಾದಿಸಿದ ಇವರು ಉಪನಿಷತ್ತುಗಳ ಆಧ್ಯಾತ್ಮಿಕ ದರ್ಶನವನ್ನು ನಿರಾಕರಿಸಲಿಲ್ಲ. ಒಂದು ಕಡೆ ಕುವೆಂಪು ಅವರ ಎಲ್ಲಾ ಮತಗಳನ್ನು ನಿರಾಕರಿಸುತ್ತಾರೆ. ಆದರೆ ಇನ್ನೊಂದು ಕಡೆ ಆತ್ಮಪಥವನ್ನು ಅಂಗೀಕರಿಸುತ್ತಾರೆ. ಇದರ ಸಮನ್ವಯತೆಯಿಂದ ಕುವೆಂಪು ಅವರು ಒಂದು ಹೊಸ ಆಧ್ಯಾತ್ಮಿಕ ಸಾಹಿತ್ಯ ಪ್ರಪಂಚವನ್ನು ಸೃಷ್ಟಿಸಿ ನವವೈಚಾರಿಕತೆಗೆ ನಾಂದಿ ಹಾಡುತ್ತಾರೆ.

ಕುವೆಂಪು ಅವರು ತಮ್ಮ ವೈಚಾರಿಕ ಅಭಿವ್ಯಕ್ತಿಯನ್ನು ಮಂಡಿಸುವಾಗ ಹಳೆಯ ಸಂಸ್ಕೃತಿ – ಸಂಪ್ರದಾಯಗಳನ್ನು ಸಂಪೂರ್ಣವಾಗಿ ತಿರಸ್ಕರಿಸದೆ ಅವುಗಳಿಗೆ ಬೇಕಾದ ಅಗತ್ಯವಾದ ಮೂಲಭೂತ ಮೌಲ್ಯಗಳನ್ನು ಹೊಸದಾಗಿ ಕಟ್ಟುವುದರ ಮೂಲಕ ವಿಶೇಷವಾದ ಸಂಸ್ಕೃತಿಯನ್ನು ಪ್ರತಿಪಾದಿಸಿದರು. ಜೀವ ವಿರೋಧಿಯಾದ ಮೌಲ್ಯಗಳನ್ನು ಬುಡಮೇಲು ಕಿತ್ತೆಸೆದು ಜೀವಪರ ಧೋರಣೆಯ ಹೊಸ ಮೌಲ್ಯಗಳನ್ನು ಸಾಹಿತ್ಯದಲ್ಲಿ ಪ್ರಕಟಪಡಿಸಿದರು. ಆಧ್ಯಾತ್ಮ ಮತ್ತು ವಿಜ್ಞಾನಗಳ ಎರಡು ವಿಭಿನ್ನ ನೆಲೆಗಳನ್ನು ಅನುಸಂಧಾನಗೊಳಿಸುತ್ತಲೇ ಸತ್ಯಕ್ಕೆ ಮುಖಾಮುಖಿಯಾಗುವ ಬಗೆಯನ್ನು ಕುವೆಂಪು ಅವರ ನಿರಂತರ ಚಿಂತನೆ ಸಾಧಿಸಿತು.

ನಮ್ಮ ವಿವೇಚನೆಯ ವಸ್ತು ಸೂಕ್ಷ್ಮವಾದಂತೆ ವ್ಯಾಪಕವಾದಂತೆ ಅದಕ್ಕೆ ಅನುಗುಣವಾಗಿ ವಿವೇಚನೆಯ ರೀತಿಯೂ ಬದಲಾಗಬೇಕಾಗುತ್ತದೆ. ಹೊರಗಿನ ಕೆಲವು ಭೌತಿಕ ವಸ್ತುಗಳನ್ನು ಅಂದರೆ ಸೂರ್ಯನ ಮೇಲ್ಮೈ ರಚನೆ, ಸೌರಮಂಡಲ ರಚನೆಯ ಇತರೆ ಸೂಕ್ಷ್ಮತೆಗಳನ್ನು ತಿಳಿಯಲು ಸೂಕ್ಷ್ಮದರ್ಶಕ ಯಂತ್ರ, ದೂರದರ್ಶಕಯಂತ್ರಗಳನ್ನು ಬಳಸಬೇಕಾಗುತ್ತದೆ. ಅದೇ ರೀತಿ ಆಧ್ಯಾತ್ಮಿಕ ಅಂತರಂಗದ ಸೂಕ್ಷ್ಮಭಾವನೆಗಳನ್ನು ಭಾವುಕತೆಯ ಆಲೋಚನಾಶಕ್ತಿಯೊಂದಿಗೆ ಪರಿಭಾವಿಸುತ್ತಾ ಉಜ್ಜಿ, ತಿಕ್ಕಿ, ಬಡಿದು ಸ್ಪಷ್ಟವಾದ ರೂಪವನ್ನು ಪಡೆಯುವಂತೆ ಮಾಡುವ ವಿಚಾರಲಹರಿಯ ಚೈತನ್ಯಶಕ್ತಿ ಅಮೂರ್ತ ರೂಪದಲ್ಲಿರುತ್ತದೆ ಎಂಬುದನ್ನು ಕುವೆಂಪು ಅವರು ವಿಶದಪಡಿಸಿರುವುದನ್ನು ಕಾಣಬಹುದು. ಈ ಮೂಲಕ ವೈಚಾರಿಕತೆಯನ್ನು ವೈಜ್ಞಾನಿಕ ದೃಷ್ಟಿಯೊಂದಿಗೆ ಸಮೀಕರಿಸಿ ರಸಾನುಭೂತಿಯನ್ನು ಪಡೆಯಬೇಕೆಂಬುದು ಕುವೆಂಪು ಅವರ ಆಶಯ.

"ವಿಶ್ವಪ್ರಜ್ಞೆಯೆಂಬುದು ತನ್ನ ಸುತ್ತಮುತ್ತಲವರಿಂದ ಪ್ರಾರಂಭವಾಗಿ ಅನಂತರ ವಿಶ್ವವನ್ನೆಲ್ಲಾ ವ್ಯಾಪಿಸಬೇಕು" ಎಂಬ ತಮ್ಮ ಅಭಿಪ್ರಾಯವನ್ನು ಕುವೆಂಪು ಮತ್ತೆ ಮತ್ತೆ ಒತ್ತಿ ಹೇಳುತ್ತಾರೆ. ಯಾವುದೇ ವ್ಯಕ್ತಿಯು ತನ್ನ ಸುತ್ತಮುತ್ತಲಿನವರ ಕ್ಷೇಮಕ್ಕಾಗಿ ದುಡಿಯದೆ ಹೊರತು ವಿಶ್ವಪ್ರಜ್ಞೆಯನ್ನು ಸಾಧಿಸಿಕೊಳ್ಳಲಾರ. ಮೊದಲು ತನ್ನ ಮನೆಯವರ, ತನ್ನ ಸುತ್ತಲಿನವರ ಬುದ್ಧಿ ಮನಸ್ಸನ್ನು ಶುಚಿಯಾಗಿಟ್ಟುಕೊಳ್ಳಬೇಕೆಂದು ಹೇಳುತ್ತಾರೆ. ನಾಡು ಮತ್ತು ನುಡಿಗಳಿಗಾಗಿ ಕುವೆಂಪು ಅವರು ದುಡಿದದ್ದು, ಅನೇಕ ವೇಳೆ ಖಚಿತವಾಗಿ, ಕಟುವಾಗಿ ಪ್ರತಿಪಾದಿಸಿರುವುದನ್ನು ಗಮನಿಸಬಹುದು.

ಸಕಲಜ್ಞಾನ ಚೇತನವಾಗಿದ್ದ ಕುವೆಂಪು ಅವರು ಸಮಾಜದಲ್ಲಿನ ಮೂಲಭೂತ ಸಮಸ್ಯೆಗಳಿಗೆ ತಮ್ಮದೇ ಆದ ಸಂವೇದನಾಶೀಲ ಚಿಂತನೆಗಳ ಮೂಲಕ ಪರಿಹಾರ ಒದಗಿಸುತ್ತಿದ್ದರು. ವರ್ತಮಾನದ ರಾಜಕೀಯ ಚಟುವಟಿಕೆಗಳು ಸಾರ್ವಜನಿಕರನ್ನು, ಸಾಮಾನ್ಯರನ್ನು ಗೊಂದಲದ ಪರಿಸ್ಥಿತಿಗೆ ಕೊಂಡೊಯ್ಯುತ್ತಿದೆ. ತಮ್ಮ ಅಧಿಕಾರದ ವ್ಯಾಮೋಹಕ್ಕೆ ಒಳಗಾಗಿ ಜನರನ್ನು ಕಾಯಬೇಕಾದ ರಕ್ಷಕರೇ ಜನರ ಆಶೋತ್ತರಗಳನ್ನು ಕಡೆಗಣಿಸಿ ಸ್ವಾರ್ಥಪರವಾಗಿ ವಿಜೃಂಭಿಸುತ್ತಿದ್ದಾರೆ!. 'ಬೇಲಿಯೇ ಎದ್ದು ಹೊಲ ಮೇಯುವಂತೆ' ನಮ್ಮನ್ನಾಳುವವರು ನಮ್ಮನ್ನೇ 'ಆಳು'ಗಳನ್ನು ಮಾಡಿಕೊಂಡು ತಾವು ಮಾತ್ರ ಸುಖದಿಂದ ಬಾಳುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಇಂತಹ ನಡೆಗಳು ಮಾರಕವೇ ಹೌದು.

ಕುವೆಂಪು ಅವರಿಗೆ ಅಖಂಡ ಕರ್ನಾಟಕದ ಬಗ್ಗೆ ಅಪಾರ ಕಾಳಜಿ ಇತ್ತು. ಆದರೆ ಅಂದಿನ ರಾಜಕೀಯ ಸನ್ನಿವೇಶಗಳು ಅಖಂಡ ಕರ್ನಾಟಕದ ಬಗ್ಗೆ ಹೊಂದಿದ್ದ ಧೋರಣೆಗಳು ಮುಜುಗರವನ್ನುಂಟು ಮಾಡಿದಾಗ ಒಂದು ಕವನದ ಮೂಲಕ ಅಸಹನೆಯನ್ನು ಹೊರಹಾಕಿರುವುದನ್ನು ಕಾಣಬಹುದು.

**ಅಖಂಡ ಕರ್ನಾಟಕ :**

**ಅಲ್ತೊ ನಮ್ಮ ಬೂಟಾಟದ ರಾಜಕೀಯ ನಾಟಕ!**
**ಇಂದು ಒಂದು, ನಾಳೆ ಸಂದು**
**ಹೋಹ ಸಚಿವ ಮಂಡಲ**
**ರಚಿಸುವೊಂದು ಕೃತಕವಲ್ತೊ**
**ಸಿರಿಗನ್ನಡ ಸರಸ್ವತಿಯ**
**ವಜ್ರ ಕರ್ಣಕುಂಡಲ**

ಎಂದು ಕರ್ನಾಟಕದ ಹಿಂದಿದ್ದ ರಾಜಕೀಯವನ್ನು ಕಂಡು ಕೆರಳುವುದರ ಜೊತೆಗೆ 'ಕನ್ನಡದ ಕೆಚ್ಚನ್ನು' ಎತ್ತಿ ಹಿಡಿದರು. ಕನ್ನಡ ಜನಮನವನ್ನು ರೂಪಿಸುತ್ತಾ ಬಂದಿರುವ ಮಹತ್ತರವಾದ ಕನ್ನಡ ಸಾಂಸ್ಕೃತಿಕ ಪರಂಪರೆಯನ್ನು ಲಾಭದ ಅಸ್ತ್ರವನ್ನಾಗಿ ಮಾಡಿಕೊಳ್ಳುವುದು ಸಲ್ಲ; ತಮ್ಮ ರಾಜಕೀಯ ಸ್ವಾರ್ಥ ಸಾಧನೆಗಾಗಿ

**AKSHARASURYA**
Peer-Reviewed, Multi Lingual E-Journal
Volume – 01, Issue – 02, November 2022.

ಕರ್ನಾಟಕ ನಾಡು ನುಡಿಯನ್ನು ಬಳಸಿಕೊಳ್ಳುವುತ್ತಿರುವುದಕ್ಕೆ ನಿಷ್ಠುರವಾಗಿ ಖಂಡಿಸುತ್ತಾರೆ. ಯಾರೊಬ್ಬರು ಕೂಡ ತಮ್ಮ ಸ್ವದೇಶಾಭಿಮಾನವನ್ನು ಬೆಳೆಸಿಕೊಂಡು ನಾಡು – ನುಡಿಯನ್ನು ಉಳಿಸಬೇಕೆ ಹೊರತು ಇದರಲ್ಲೂ ತಮ್ಮ ಸ್ವಾರ್ಥತೆಯ ಬೇಳೆ ಬೆಳೆಯಿಸಿಕೊಳ್ಳಬಾರದು ಎಂಬುದು ಕುವೆಂಪು ಅವರ ನಿಲುವು. ಮುಂದುವರೆದು 'ಅಖಂಡ ಕರ್ನಾಟಕ' ಎಂಬುದು ನಮ್ಮ ಬಾಳಿನ ಉಸಿರಾಗಬೇಕು, ಹೆಸರಾಗಬೇಕು, ನಡೆಯಾಗಬೇಕು, ನುಡಿಯಾಗಬೇಕು, ಅದು ಕೇವಲ ಕೀರ್ತಿ ಶನಿಗಲ್ಲ ಎಂದು ಹೇಳುತ್ತಾರೆ.

ಸುಮಾರು ೧೯೨೫–೨೬ ರಿಂದ ೧೯೪೭–೪೮ ರವರೆಗೆ ನಡೆದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮಹತ್ ಸಂಗತಿಗಳನ್ನು ಕುವೆಂಪು ಅವರು ತಮ್ಮ ಕವಿಚೇತನದಲ್ಲಿ ಪ್ರತಿಸ್ಪಂದಿಸುತ್ತಾರೆ. 'ಪಾಂಚಜನ್ಯ', 'ಕೋಗಿಲೆ ಮತ್ತು ಸೋವಿಯತ್ ರಷ್ಯಾ', 'ಕೃತ್ತಿಕೆ', 'ಇಕ್ಷುಗಂಗೋತ್ರಿ' ಈ ಮೊದಲಾದ ಕವನ ಸಂಕಲನಗಳು ಅದಕ್ಕೆ ಸಾಕ್ಷಿಯಾಗಿವೆ. ಸ್ವಾತಂತ್ರ್ಯ ಹೋರಾಟದ ಎಲ್ಲ ಪ್ರಮುಖ ಘಟನೆಗಳೂ 'ಸ್ವಾತಂತ್ರ್ಯೋದಯ ಮಹಾಪ್ರಗಾಥ'ದಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಕುವೆಂಪು ಅವರು 'ಸಂಸ್ಕೃತಿ ಕರ್ನಾಟಕ'ದ ಅಸ್ತಿತ್ವವನ್ನು ದಾರ್ಶನಿಕ ದೃಷ್ಟಿಯಿಂದ ಕಂಡು ಭೌಗೋಳಿಕ ಕರ್ನಾಟಕದ ಕನಸನ್ನು ನನಸು ಮಾಡುವ ಮಂಗಳಗೀತೆಯನ್ನು ಹಾಡಿದರು. ವಿದ್ಯಾರ್ಥಿಯಾಗಿದ್ದಾಗಲೇ, ೧೯೨೪ ಕ್ಕಿಂತ ಹಿಂದೆಯೇ 'ಕರ್ನಾಟಕ ರಾಷ್ಟ್ರಗೀತೆ' ಎಂಬ ಕವನವನ್ನು ರಚಿಸಿದರು. ಅದೇ ಮುಂದೆ ಪರಿಷ್ಕಾರಗೊಂಡು 'ಜಯಹೇ ಕರ್ಣಾಟಕ ಮಾತೆ' ಎಂಬ ಪ್ರಸಿದ್ಧ ನಾಡಗೀತೆಯಾಗಿ ಪರಿಣಮಿಸಿದ್ದನ್ನು ಮನಗಾಣಬಹುದು. ಈ ಮೂಲಕ 'ಸಾಂಸ್ಕೃತಿಕ ಕರ್ನಾಟಕ'ದ ದರ್ಶನವನ್ನು ಕಂಡರು.

'ಅಖಂಡ ಕರ್ನಾಟಕ' ಪರಿಕಲ್ಪನೆಯ ನೆಲೆಯಲ್ಲಿ ಎಲ್ಲರೂ ಒಮ್ಮತದಿಂದ ಒಕ್ಕೊರಲಾಗಿ, ಸ್ವಾರ್ಥ, ಲೋಭ, ಮದ, ಮತ್ಸರಗಳನ್ನು ದೂರ ಸರಿಸಿ ಎಲ್ಲರಿಗೂ ಬೇಕಾದ ನಾಡನ್ನು ಕಟ್ಟೋಣ. ಕರ್ನಾಟಕ ಎಂದರೆ ಶಕ್ತಿ, ಮಂತ್ರ, ತಾಯಿ, ಬೆಂಕಿ, ಸಿಡಿಲು, ಋಷಿಯು ಕಾಣುವ ಕಾಣ್ಕೆ ಎಂದು ದಾರ್ಶನಿಕ ನಿಲುವಿನೊಂದಿಗೆ ರಾಜಕೀಯ ವ್ಯವಸ್ಥೆಗೆ ಒಂದು ವಿವೇಚನಾತ್ಮಕ ಚಿಂತನೆಯನ್ನು ಕಟ್ಟಿಕೊಟ್ಟಿದ್ದಾರೆ ಎನ್ನಬಹುದು.

ಭಾರತೀಯ ಉಜ್ವಲ ಪರಂಪರೆಯ ಹಿನ್ನೆಲೆಯಲ್ಲಿ ನಮ್ಮ ಶಿಕ್ಷಣದ ಉದಾತ್ತ ಆಶಯ ಆದರ್ಶಗಳನ್ನು ಕಂಡ ಕುವೆಂಪು ಅವರು ಆಧುನಿಕ ವಿದ್ಯಾಭ್ಯಾಸದ ಇತಿಮಿತಿಗಳನ್ನು ಕುರಿತು ಆಲೋಚಿಸಿದ್ದಾರೆ. ಸ್ವತಃ ಶಿಕ್ಷಕರಾಗಿದ್ದ ಕುವೆಂಪು ಅವರು ಸಹಜವಾಗಿಯೇ ತಮ್ಮ ದೃಷ್ಟಿಯನ್ನು ಶಿಕ್ಷಣದ ಕಡೆಗೆ ಹಾಯಿಸಿದರು. ವಿದ್ಯಾರ್ಥಿಗಳು ಶಿಕ್ಷಣದಿಂದ ಏನನ್ನು ಪಡೆಯಬೇಕು, ಪಡೆದುದನ್ನು ಹೇಗೆ ಜೀವನದಲ್ಲಿ ಅಳವಡಿಸಿಕೊಂಡು ಬದುಕಬೇಕು ಎಂಬುದನ್ನು 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಗ್ರಂಥದ ಕೆಲವು ಭಾಷಣಗಳಿಂದ ತಿಳಿಯಬಹುದು.

'ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ' ಮತ್ತು 'ವಿದ್ಯಾರ್ಥಿಗಳಲ್ಲಿ ಮತಿಗೌರವದ ಅವಶ್ಯಕತೆ' ಈ ಎರಡು ಭಾಷಣಗಳು ಈ ದೃಷ್ಟಿಯಿಂದ ಬಹಳ ಮುಖ್ಯವಾದುವು. ಶಿಕ್ಷಣವು ಮಾನವ ಜೀವನವನ್ನು ಸಾರ್ಥಕಗೊಳಿಸುವ ಅಮೂಲ್ಯ ಸಾಧನ. ಶಿಕ್ಷಣದ ಮೂಲಕ ಸಮಾಜದ ಮೆದುಳನ್ನು ತಿದ್ದಲು ಸಹಾಯವಾಗುತ್ತದೆ. ಲೌಕಿಕ ವಿದ್ಯೆಯ ಜೊತೆಗೆ ಆತ್ಮಸಂಪತ್ತನ್ನು ತಂದುಕೊಡುವ ಶಿಕ್ಷಣ ಅವಶ್ಯಕ. 'ಆತ್ಮಶ್ರೀ ಇಲ್ಲದ ವಿದ್ಯೆ ಶ್ರೀರಾಮನಿಲ್ಲದ ಅಯೋಧ್ಯೆ' ಎಂಬ ಮಾತು ಶಿಕ್ಷಣ ಮತ್ತು ವಿದ್ಯಾರ್ಥಿಗಳಲ್ಲಿರಬೇಕಾದ ಅನ್ಯೋನ್ಯತೆಯನ್ನು ನಿರೂಪಿಸುತ್ತದೆ. 'ವಿದ್ಯಾರ್ಥಿ ಜೀವನ – ಒಂದು ತಪಸ್ಸು, ಆತ್ಮಶ್ರೀ ಸಾಧಕನಾದ ವಿದ್ಯಾರ್ಥಿಯೂ ತಪಸ್ವಿ' ಎಂದು ಹೇಳುತ್ತಾ ವಿದ್ಯಾರ್ಥಿಯ ತಪಸ್ಸು ಆತನ ಅಧ್ಯಯನದಲ್ಲಿ, ಏಕಾಗ್ರತೆಯಲ್ಲಿ, ಸಂಯಮದಲ್ಲಿ, ಧ್ಯಾನದಲ್ಲಿ, ನಡೆನುಡಿಗಳಲ್ಲಿ ವ್ಯಕ್ತವಾಗಬೇಕು ಎಂದು ತಿಳಿಸುತ್ತಾರೆ.

ವರ್ತಮಾನದ ರಾಜಕೀಯ ಪಲ್ಲಟದಲ್ಲಿ ಶಿಕ್ಷಣ ವ್ಯವಸ್ಥೆಯು ಯಾವ ರೀತಿ ಬದಲಾವಣೆಗೊಳಪಡುತ್ತಿವೆ ಎಂಬುದು ಪ್ರಸ್ತುತ ಚರ್ಚೆಯ ವಿಷಯವಾಗಿದೆ. ಜಾಗತಿಕ ವಿದ್ಯಮಾನದಲ್ಲಿ ಇಂಗ್ಲಿಷಿನ ವ್ಯಾಮೋಹ ಹಾಗೂ ಅನಿವಾರ್ಯತೆಯ ಕತ್ತಿ ಅಂಚಿನಲ್ಲಿ ಸಿಲುಕಿ ಶಿಕ್ಷಣದಲ್ಲಿ ಪ್ರಾಥಮಿಕ ಹಂತದಿಂದಲೇ ಇಂಗ್ಲಿಷ್ ಮಾಧ್ಯಮಕ್ಕೆ ಒತ್ತು ನೀಡುತ್ತಿರುವುದು ವಿಷಾದಕರ. ಇದರಿಂದಾಗುವ ಪರಿಣಾಮವನ್ನು ಕುರಿತು ಈ ರೀತಿಯಾಗಿ ತಿಳಿಸುತ್ತಾರೆ.

> **"ಪಾರು ಮಾಡೆಮ್ಮ ನೀ ಇಂಗ್ಲಿಷಿನಿಂದ**
> **ಪೂತನಿಯ ಅಸುವೀಂಟಿ ಕೊಂದ ಗೋವಿಂದ"**
> **(ಪ್ರೇತಕ್ಯೂ ಪ್ರಾರ್ಥಿಸಿ, ಮಕ್ಕಳಿರಾ, ಪುಟ ೪೮)**

ಎಂದು ಪ್ರಾರ್ಥಿಸುವಂತೆ ಮಕ್ಕಳನ್ನು ಕೇಳಿಕೊಳ್ಳುತ್ತಾರೆ. ಇನ್ನೊಂದು ಕವನದಲ್ಲಿ ಈ ಅಪಾಯದಿಂದ ಪಾರು ಮಾಡುವಂತೆ ಸರಸ್ವತಿಯನ್ನೇ ಪ್ರಾರ್ಥಿಸುತ್ತಾರೆ.

> **"ಇಂಗಿ ಹೋಗುತಿದೆ ಇಂಗ್ಲಿಷ್‌ನ ಮರುಭೂಮಿಯಲಿ**
> **ನಿನ್ನ ಮಕ್ಕಳ ಶಕ್ತಿ – ಬುದ್ಧಿ – ಪ್ರತಿಭೆ ;**
> **ರಾಷ್ಟ್ರನಾಯಕ ಮನದಿ ವಿವೇಕ ರೂಪದಿ ಮೂಡಿ**
> **ಓ ರಸಮಯೀ ಸರಸ್ವತಿಯೆ ಪೊರೆ ಬಾ"[2]**

ಇಂತಹ ಅನೇಕ ಕವನಗಳಲ್ಲಿ ಕವಿಯ ಮನೋಧರ್ಮದ ಭಾವುಕತೆಯ ಹಿಂದೆ ಭಾಷಾ ಸಮಸ್ಯೆಯ ಬಗೆಗೆ ಅವರಿಗಿರುವ ವಿಶೇಷ ಕಾಳಜಿ ತೆರೆದುಕೊಂಡಿದೆ. ಯಾವುದೇ ಒಂದು ಪ್ರಾದೇಶಿಕ ಭಾಷೆಗೆ ತನ್ನದೇ ಆದ ಅಸ್ತಿತ್ವವಿರುತ್ತದೆ. ಅದನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಎಲ್ಲರ ಕರ್ತವ್ಯ. ಹಾಗೆಂದ ಮಾತ್ರಕ್ಕೆ ಬೇರೆ

ಭಾಷೆಗಳ ಬಗೆಗೆ ತಿರಸ್ಕಾರ ಸಲ್ಲದು. ನಮ್ಮ ಜ್ಞಾನ ವಿಸ್ತಾರಕ್ಕೆ ಬೇರೆ ಭಾಷೆಗಳ ಕಲಿಕೆ ಅವಶ್ಯಕತೆಯೂ ಹೌದು. ಇಲ್ಲಿನ ವಿಚಾರಗಳನ್ನು ಅರಿತು ನಮ್ಮ ಭಾಷೆಯ ಪೋಷಣೆಯನ್ನು ಮುನ್ನಡೆಸುತ್ತಿರಬೇಕು. ಆರೋಗ್ಯಕರ ಸ್ಪರ್ಧೆ ಇರಬೇಕೆ ಹೊರತು ತಮ್ಮ ಭಾಷೆಯ ಅಳಿವಿಗೆ ಕಾರಣವಾಗಬಾರದು ಎಂಬುದು ಕುವೆಂಪು ಅವರ ನಿಲುವಾಗಿದೆ.

ವಿಶ್ವಮಾನವ ಪ್ರಜ್ಞೆಯ ಸಾಕಾರ ಮನೋಭಾವವನ್ನು ಹೊಂದಿದ್ದ ಕುವೆಂಪು ಅವರು ಶ್ರೀ ಸಾಮಾನ್ಯನಿಗೂ ಮುಕ್ತ ಅವಕಾಶ ದೊರಕಿಸಿಕೊಟ್ಟರು. 'ಸರ್ವರಿಂ ಸರ್ವರಾ ಉದ್ಧಾರ' ಎಂಬ ಸೂತ್ರವನ್ನು ಆಧುನಿಕ ಯುಗ ಮನೋಧರ್ಮವೆಂದು ನಂಬಿದ್ದರು. ವರ್ಗ ಸಮಾಜದ ಕೊಂಡಿಯೊಳಗೆ ಸಿಲುಕಿ ನರಳುತ್ತಿದ್ದ ತಳ ಸಮುದಾಯದ ಮುಗ್ಧ ಜನತೆಯ ಮನೋವೇದನೆಯನ್ನು ಅರಿತಿದ್ದ ಕುವೆಂಪು 'ಪಾಪಿಗೌ ಉದ್ಧಾರಮಿಹುದು ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್' ಎಂದು ಸರ್ವ ಸಮಾನತೆಯನ್ನು ಸಾರಿದರು. ಲೋಕದ ಸಮಷ್ಟಿಶಕ್ತಿಯ ಸರ್ವಸಂಪತ್ತನ್ನು ಜಾಗೃತ್ತಗೊಳಿಸುತ್ತಾ 'ಸಾಮಾನ್ಯನ ಪೂಜೆಗೆ ಶ್ರೀ ದೀಕ್ಷೆಯ ಕೊಳ್ಳಿರಿ' ಎಂದು ಹೊಸ ಮನ್ವಂತರಕ್ಕೆ ಆಹ್ವಾನವನ್ನಿತ್ತರು. ಜೊತೆಗೆ 'ಶ್ರೀ ಸಾಮಾನ್ಯನ ದೀಕ್ಷಾ ಗೀತೆ' ಎಂಬ ಕವಿತೆಯಲ್ಲಿ ಪ್ರಜಾಪ್ರಭುತ್ವದ ಮೂಲಧ್ಯೇಯದ ಬಗ್ಗೆ ಈ ರೀತಿಯಾಗಿ ತಿಳಿಸುತ್ತಾರೆ.

**"ಕೊನೆಗೊಂಡಿತೊ ಓರೋರ್ವರ ಗರ್ವದ ಕಾಲ**
**ಇದು ಸರ್ವರ ಕಾಲ!**
**ಸರ್ವೋದಯ ! ಸರ್ವೋದಯ !**
**ಸರ್ವೋದಯ ಯುಗಮಂತ್ರ!**
**ಸರ್ವೋದಯವೇ ಸ್ವಾತಂತ್ರ್ಯದ ಶ್ರೀ ತಂತ್ರ!**
**ಮೇಲಿಲ್ಲವೊ ಕೀಳಿಲ್ಲವೊ**
**ಸರ್ವಸಮಾನದ ರಾಜ್ಯ"**

ಪ್ರಜಾಪ್ರಭುತ್ವವನ್ನೆ ಉಸಿರಾಗಿಸಿಕೊಂಡಿರುವ ನಮ್ಮ ನಾಡಿನಲ್ಲಿ ಅಣುತೃಣಕಾಷ್ಟಗಳಿಗೂ ಜೀವಿಸುವ ಹಕ್ಕಿದೆ. ಸರ್ವಾಧಿಕಾರದ, ಏಕಾಧಿಪತ್ಯದ ವೈಭೋಗದ ಆಡಳಿತ ಕೊನೆಗೊಂಡು ಸರ್ವರಿಗೂ ಸ್ವಾತಂತ್ರವನೀಯುವ ಸರ್ವೋದಯದ ಮೂಲಮಂತ್ರ ಜಪಿಸುವಂತಾಯಿತು. ಮೇಲು–ಕೀಳು ಎಂಬ ಭಾವನೆಯೇ ಹತ್ತಿರ ಸುಳಿಯದೆ ಸರ್ವರನ್ನೂ ಸಮಾನವಾಗಿ ಕಾಣುವ ಸಮಾಜದ ಮನಸ್ಥಿತಿ ಬದಲಾಗಿ ಕಲ್ಯಾಣರಾಜ್ಯ, ಸುಖೀ ರಾಜ್ಯವಾದಾಗ ಮಾತ್ರ ಸರ್ವೋದಯದ ಅಮೃತವನ್ನು ಪಡೆದುಕೊಳ್ಳಲು ಸಾಧ್ಯ.

ಈ ನವ ಸಮಾಜವನ್ನು ಕಟ್ಟುವಲ್ಲಿ ತರುಣರ ಪಾತ್ರ ದೊಡ್ಡದು. ಹಾಗಾಗಿ "ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು ಎಂಬ ನವಯುಗವಾಣಿ ಘೋಷಿಸಿದೆ ಕೇಳಿ" ಎಂದು ತರುಣರಿಗೆ ಕರೆಕೊಟ್ಟರು.

ಸರ್ವೋದಯ ಯುಗಮಂತ್ರವನ್ನು ಸಮರ್ಥಿಸುವಂತಹ 'ಹೊಸಬಾಳಿನ ಗೀತೆ', 'ಗೊಬ್ಬರ' ಮೊದಲಾದ ಅನೇಕ ಗೀತೆಗಳನ್ನು ಕಾಣಬಹುದು. ಸ್ವಾತಂತ್ರ್ಯೋತ್ತರ ಸಾಮಾಜಿಕ ಸಮಾನತೆಯ ಸಾಧನೆಯಲ್ಲಿ 'ಕಲ್ಕಿ'ಯಾಗಿ ಕೆರಳಿ ಕವಿತೆಯನ್ನು ರಚಿಸಿದ್ದಾರೆ. ಈ ಮೂಲಕ ಹಳೆ ಜಾತಿ, ಮತ, ಶಾಸ್ತ್ರ, ಮೌಢ್ಯಗಳು ಮರೆಯಾಗಿ ಹೊಸ ಸಮಾಜದ ಹುಟ್ಟು ಹತ್ತಿರವಾಗಬೇಕೆಂದು ಪ್ರತಿಪಾದಿಸಿದರು.

ಕುವೆಂಪುರವರು ತಮ್ಮ ಒಂದು ಭಾಷಣವನ್ನು 'ವಿಚಾರ ಕ್ರಾಂತಿಗೆ ಆಹ್ವಾನ' ಎಂಬ ಶೀರ್ಷಿಕೆಯಿಂದಲೇ ಕರೆದಿದ್ದಾರೆ. ಸ್ವತಂತ್ರ ಭಾರತ ತನ್ನ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಯಾವ ದಿಕ್ಕಿನತ್ತ ಹೆಜ್ಜೆಯಿಟ್ಟಿದೆ ಎಂಬ ನಿರೂಪಣೆ ಅಲ್ಲಿದೆ. ಇಲ್ಲಿ ಸಾವಿರಾರು ಜನರ ಬಲಿದಾನದಿಂದ ಪಡೆದ ಸ್ವಾತಂತ್ರ್ಯದ ಆಶ್ರಯವೇನಾಗಿದೆ ಎಂಬುದನ್ನು ಕುವೆಂಪು ಅವರು ಈ ಭಾಷಣದಲ್ಲಿ ತಮ್ಮ ನೋವನ್ನು ತೋಡಿಕೊಂಡಿದ್ದಾರೆ. ಹಾಗೆಯೇ ವಿದ್ಯಾಭ್ಯಾಸವನ್ನು ಪಡೆದ ಯುವ ಪೀಳಿಗೆ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕೆಂಬುದನ್ನು ವೈಚಾರಿಕವಾಗಿ ವಿವೇಚಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರ ಆದರ್ಶ ಮತ್ತು ಹೋರಾಟದ ತತ್ವಕ್ಕೆ ಆಕರ್ಷಿತರಾಗಿ ಇದ್ದಿಲ ಚೂರುಗಳಾಗಿದ್ದವರು ಬೆಂಕಿಯ ಕೆಂಡಗಳಾಗಿ ಹೊಳೆದರು. ವಿಪರ್ಯಾಸವೆಂದರೆ ಸ್ವಾತಂತ್ರದ ನಂತರ ಈ ಕೆಂಡಗಳೇ ಮತ್ತೆ ಇದ್ದಿಲುಗಳಾದವು ಅಥವಾ ಬೂದಿಯಾಗಿ ಉದುರಿ ಹೋದವು. ಇಂತಹ ಪರಿಸ್ಥಿತಿ ಇರುವ ಬದುಕಿಗೆ ಪ್ರವೇಶಿಸುತ್ತಿರುವ ಅವರ ಮುಂದೆ ಈ ಸಮಸ್ಯೆಗಳನ್ನು ನಿವೇದಿಸಿ ಇವುಗಳನ್ನು ಎದುರಿಸುವ ವಿಚಾರ ಕ್ರಾಂತಿಗೆ ಅವರನ್ನು ಆಹ್ವಾನಿಸುತ್ತಾರೆ.

ಕುವೆಂಪು ಅವರು ಕವನಗಳ ಮೂಲಕ ಏನು ಹೇಳಿದರೋ ಹಾಗೆಯೇ ನುಡಿದಂತೆ ನಡೆದು ವೈಚಾರಿಕವಾಗಿ ಆಚರಿಸಿ ತೋರಿಸಿದರು. ತಮ್ಮ ಭಾಷಣಗಳಲ್ಲಿ ತರ್ಕಬದ್ಧವಾಗಿ ಚರ್ಚಿಸಿ ವೈಚಾರಿಕ ಮತ್ತು ವೈಜ್ಞಾನಿಕ ವಿಚಾರಗಳ ಮೂಲಕ ಯುವಕರಲ್ಲಿ ಜಾಗೃತಿಯನ್ನುಂಟು ಮಾಡಿದರು. ಅವರ ನಾಲ್ಕು ಭಾಷಣಗಳು ಕೂಡ ಪ್ರಸ್ತುತವಾಗಿಯೂ ತರುಣರನ್ನು ಬಡಿದೆಬ್ಬಿಸುವಂತಿವೆ.

ಸಮಾಜದಲ್ಲಿನ ಈ ತರತಮಭಾವ ಹೋಗಬೇಕಾದರೆ ಅದಕ್ಕೆ ಕುವೆಂಪು ಅವರು ಸೂಚಿಸುವ ಮಾರ್ಗ, ಹಿಂಸೆ, ದ್ವೇಷದ, ಪ್ರತಿಭಟನೆಯ ಮಾರ್ಗ ಅಲ್ಲ. ಜನ ಎಚ್ಚೆತ್ತುಕೊಂಡು ಅವರೊಡನೆ ಸಹಕರಿಸದೆ ಇರುವ ವಿಚಾರ ಮಾರ್ಗ ಕುವೆಂಪು ಅವರ ಈ ಎಲ್ಲಾ ವಿಚಾರ ಕ್ರಾಂತಿ ವ್ಯಕ್ತಿಯ ಮತ್ತು ಸಮಾಜದ ಶ್ರೇಯಸ್ಸಿಗಾಗಿ ಹೇಳಿದ ಮಾತುಗಳಾಗಿವೆ. ತಮ್ಮ ಸೃಜನಾತ್ಮಕ ಕೃತಿಗಳಲ್ಲಿ ಕವಿ ಹೃದಯದ ದಾರ್ಶನಿಕ ನಿಲುವಿನಿಂದ ಅದನ್ನು ಚಿತ್ರಿಸಿದ್ದಾರೆ. ಹಾಗೆಯೇ ತಮ್ಮ ವೈಚಾರಿಕ ಚಿಂತನೆಯ ಪ್ರಬಂಧ ಮತ್ತು ಭಾಷಣಗಳಲ್ಲಿ ವ್ಯಷ್ಟಿ ಮತ್ತು

ಸಮಷ್ಟಿಗಳ ಸಮರಸದ ಜೀವನ ದೃಷ್ಟಿಯನ್ನು ಕಟ್ಟಿಕೊಟ್ಟಿದ್ದಾರೆ. ಮತ-ಧರ್ಮ, ಆಧ್ಯಾತ್ಮ, ಆತ್ಮಶ್ರೀಗಳನ್ನು ನಿಷ್ಠುರವಾಗಿ ತಿಳಿಸುವಾಗ ಈ ಮೇಲಿನ ಎಲ್ಲಾ ಆಶಯಗಳನ್ನು ನೋಡಬಹುದು.

ಕವಿ ಪರಿಸರದ ಶಿಶು ಎನ್ನುವಂತೆ ಕುವೆಂಪು ಅವರು ಪ್ರಕೃತಿ ಕವಿ, ಆಧ್ಯಾತ್ಮ ಕವಿ ಎಂಬ ಮಾತು ನಿಜ. ಪ್ರಕೃತಿ ಪ್ರೇಮಿಯಾದ ಕುವೆಂಪು ಅವರನ್ನು ಅದು ಪಲಾಯನವಾದಿಯನ್ನಾಗಿ ಅಥವಾ ಜೀವನ ವಿಮುಖರನ್ನಾಗಿ ಮಾಡಲಿಲ್ಲವೆಂಬುದೆ ಇಲ್ಲಿ ಗಮನಿಸಬೇಕಾದ ಅಂಶ. ಮಲೆನಾಡಿನ ಪರಿಸರದಲ್ಲಿದ್ದ ಇವರಿಗೆ ಹೂವು, ಹಕ್ಕಿ, ಕಾಡು-ಮೇಡುಗಳಲ್ಲಿ ಮೈಮರೆತ ಕವಿ ಎಂದು ಅವರ ಬಗ್ಗೆ ಮಾತನಾಡುವುದುಂಟು. ಆದರೆ ಅವರು ಏಕಾಂತ ಪ್ರಿಯತೆಯ ಅಂತರ್ಮುಖಿಗಳಂತೆ ಕಂಡರೂ ಅವರ ಕವಿ ಹೃದಯ ಸಮಷ್ಠಿ ಜನಜೀವನದ ಸಮಸ್ಯೆಗಳ ಕಡೆಗೆ ಸದಾ ಮಿಡಿಯುತ್ತಿತ್ತು ಎಂಬುದನ್ನು ಮರೆಯುವಂತಿಲ್ಲ. ಕುವೆಂಪು ಪರಿಸರದ ಪ್ರಭಾವಕ್ಕೆ ಸ್ಪಂದಿಸಿದ್ದಾರೆ ನಿಜ, ಆದರೆ ಅದರಲ್ಲೇ ಕೊಚ್ಚಿ ಹೋಗದೆ ತಮ್ಮ ವೈಚಾರಿಕ ಹಾಗೂ ವೈಜ್ಞಾನಿಕ ನಿಲುವಿನಿಂದ ಹೊಸ ದೃಷ್ಟಿಕೋನವನ್ನು ಕಟ್ಟಿಕೊಡುತ್ತಾರೆ. ಈ ಬಗೆಯ ಚಿಂತನಾಶೀಲತೆಯ ವಿಚಾರಗಳನ್ನು ಅವರ ಎಲ್ಲಾ ಕೃತಿಗಳಲ್ಲಿಯೂ ಒಂದಲ್ಲ ಒಂದು ರೂಪದಲ್ಲಿ ಮನಗಾಣಬಹುದು. ಸಾಂಸ್ಕೃತಿಕ ಜೀವಸತ್ವದಿಂದ ನಳನಳಿಸುತ್ತಿದ್ದ ಒಂದು ಹಳ್ಳಿ ಕ್ರಮೇಣವಾಗಿ ಜೀವನವಂಚಿತವಾಗಿ ಹಾಳಾಗುತ್ತದೆ ಎಂಬುದನ್ನು ಅರ್ಥಪೂರ್ಣವಾಗಿ ಕಣ್ಣಿಗೆ ಕಟ್ಟುವಂತೆ ತಮ್ಮ ನೀಳ್ಗವನದಲ್ಲಿ ಚಿತ್ರಿಸಿದ್ದಾರೆ. ನಗರ ಸಂಸ್ಕೃತಿಗೆ ಆಕರ್ಷಿತರಾಗಿ ಹಳ್ಳಿಯ ಸರ್ವರು ಪಟ್ಟಣದ ಕಡೆಗೆ ಮುಖ ಮಾಡಿರುವ ಸಾಮಾಜಿಕ ದುರಂತವನ್ನು ಕಾಣಬಹುದು.

**"ಪುರಗಳನು ಸೇರಿದರು ಹಳ್ಳಿಯವರೆಲ್ಲ;**
**ಹಳ್ಳಿ ನಿರ್ಜನವಾಯ್ತು ಕೇಳುವರೆ ಇಲ್ಲ"**

ಎಂದು ಪ್ರಾರಂಭದಲ್ಲಿಯೆ ಬರುವ ಮಾತುಗಳು ಆ ಚಿತ್ರಣವನ್ನು ಧ್ವನಿಸುತ್ತವೆ. ಹೀಗೆ ಹಳ್ಳಿಗಳು ಬರಿದಾಗಿ ಪಟ್ಟಣಗಳು ಬೆಳೆಯುತ್ತಾ ಬಡವ ಶ್ರೀಮಂತರಲ್ಲಿನ ಅಂತರ ಹೆಚ್ಚಾಗುತ್ತಿದೆ. ಹಾಗೆಯೆ ರೈತರ ಶೋಷಣೆ ಬಡಜನರ ಬವಣೆ, ಜಾತಿ ಮತಗಳ ತಾರತಮ್ಯ ಎಲ್ಲವನ್ನೂ ತಮ್ಮ ವೈಚಾರಿಕ ಓರೆಗಲ್ಲಿಗೆ ಉಜ್ಜಿರುವುದನ್ನು ಈ ಕವನದಲ್ಲಿ ಕುವೆಂಪು ದಾಖಲಿಸಿದ್ದಾರೆ.

ಕುವೆಂಪು ಅವರ ಬರಹಗಳಲ್ಲಿ ಮತ-ಧರ್ಮಗಳನ್ನು ಕುರಿತ ವೈಚಾರಿಕ ವಿವೇಚನೆ, ವಿಶ್ಲೇಷಣೆಗಳು ಆರಂಭದಿಂದಲೂ ಬೆಳೆದು ಬಂದಿರುವುದನ್ನು ಗಮನಿಸಬಹುದು. ಹಾಗೆಯೇ ತಮ್ಮ ಭಾಷಣಗಳಲ್ಲಿ, ಪ್ರಬಂಧಗಳಲ್ಲಿ ಮಾತ್ರವಲ್ಲದೆ ಕವನ, ನಾಟಕ, ಕಾದಂಬರಿ ಮೊದಲಾದ ಸಾಹಿತ್ಯ ಕೃತಿಗಳಲ್ಲಿ ಸಂದರ್ಭಕ್ಕನುಗುಣವಾಗಿ ಕಟುವಾದ ವಿಮರ್ಶೆ ಮಾಡಿರುವುದನ್ನು ಗಮನಿಸಬಹುದು. ಜಾತಿ ಉಪಜಾತಿಗಳನ್ನು ಬೆಳೆಸುವ ವಿಚ್ಛಿದ್ರಕಾರಕ ಶಕ್ತಿಗಳಾಗಿರುವುದನ್ನು ಕಂಡು ಅವರು ಕೆರಳುತ್ತಾರೆ. ಅಲ್ಲದೆ

ಮೂಢನಂಬಿಕೆ, ಅಂಧಶ್ರದ್ಧೆಯ ಆಚರಣೆಗಳನ್ನು ಜನ ಮಾನಸದಲ್ಲಿ ಬಿತ್ತಿ ಬೆಳೆಯುವುದನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ಖಂಡಿಸಿರುವುದನ್ನು ಕಾಣಬಹುದು. ಹಾಗಾಗಿ ಮತಧರ್ಮಗಳಿಂದ ಪಾರಾಗಿ ವಿಶ್ವ ಮಾನವ ಧರ್ಮವನ್ನು ರೂಪಿಸಿಕೊಳ್ಳುವುದರ ಕಡೆಗೆ ಅವರ ವೈಚಾರಿಕ ದೃಷ್ಟಿ ವಿಕಸನಗೊಂಡಿದೆ. ಅಂದರೆ ನಾಡಿನ ಯುವ ಮನಸುಗಳನ್ನು ಕುರಿತು ಅವರ ಕಿವಿ ಮಾತು 'ನಿರಂಕುಶಮತಿಗಳಾಗಿ' ಎಂಬ ಮಾತು ಅವರ ವೈಚಾರಿಕ ದೃಷ್ಟಿಗೆ ಸಾಕ್ಷಿಯಾಗಿದೆ. ಮತ ಧರ್ಮಗಳು ಸಂಕುಚಿತ ಜಾತಿಯಾಗಿ ಅದರಿಂದಾಗುವ ಸಾಮಾಜಿಕ ವಿಪರ್ಯಾಸಗಳನ್ನು ಕಟುವಾಗಿ ಖಂಡಿಸಿದ್ದಾರೆ. ಆದ್ದರಿಂದ ಮತ, ಭ್ರಾಂತಿ, ಮತ–ಮೌಢ್ಯಗಳನ್ನು ನಿರಾಕರಿಸಬೇಕೆಂಬುದನ್ನು ಮತ್ತೆ – ಮತ್ತೆ ಹಲವು ಬಗೆಗಳಲ್ಲಿ ತಮ್ಮ ಅನೇಕ ಕೃತಿಗಳಲ್ಲಿ ಪ್ರತಿಪಾದಿಸುತ್ತಲೇ ಬಂದಿರುವುದನ್ನು ಗುರುತಿಸಬಹುದು.

ಧರ್ಮದ ಮೂಲ ಅಡಗಿರುವುದೇ ಆಧ್ಯಾತ್ಮದಲ್ಲಿ. ಎಲ್ಲಾ ಧರ್ಮಗಳ ತಾಯಿ ಬೇರು ಆಧ್ಯಾತ್ಮ. ಆದರೆ ಅದು ಬೆಳೆ ಬೆಳೆಯುತ್ತಾ ಸಂಪ್ರದಾಯಗಳ ಬೇಲಿಯನ್ನು ತನ್ನ ಸುತ್ತ ನಿರ್ಮಿಸಿಕೊಂಡು ಒಂದು ಸ್ಥಿತಿಯಲ್ಲಿ ಧರ್ಮ, ಆಧ್ಯಾತ್ಮವನ್ನು ಕಳೆದುಕೊಂಡು ಮತ ಜಾತಿಗಳೆಂಬ ವಿಷದ ವರ್ತುಲವನ್ನು ನಿರ್ಮಿಸಿಕೊಂಡಿತು. ಅದರ ಆಶ್ರಯದಲ್ಲಿ ಅನೇಕ ಅಂಧಶ್ರದ್ಧೆಗಳು, ಮೂಢನಂಬಿಕೆಗಳು, ಅರ್ಥರಹಿತ ಆಡಂಬರಗಳು ಬೆಳೆದು ಬಂದವು. ಕುವೆಂಪು ಅವರು ಖಂಡಿಸುವುದು ಈ ವಿಕೃತ ಬೆಳವಣಿಗೆಗಳನ್ನೇ ಹೊರತು ಮೂಲಧರ್ಮವನ್ನಲ್ಲ. ಅಂದರೆ ಉಪನಿಷತ್ತುಗಳ ಹಿನ್ನೆಲೆಯಲ್ಲಿ ರೂಪಿತವಾದ ಜ್ಯೋತಿಷ್ಯ, ಶಕುನಗಳು, ಅಂಧಶ್ರದ್ಧೆಗಳು ಇವು ಹಿಂದೂ ಧರ್ಮಕ್ಕೆ ಮಾರಕವೆಂಬುದನ್ನು ಸೂಚ್ಯವಾಗಿ ಆಗಲೇ ಎಚ್ಚರಿಸಿದ್ದರು. ಹೀಗೆ ಮತೀಯ ಅಂಧಶ್ರದ್ಧೆಯನ್ನು ಅವಿಚಾರಗಳನ್ನು ಖಂಡಿಸುವಂತೆಯೇ, ಇನ್ನೊಂದು ಕಡೆಯಲ್ಲಿ ಹಿಂದೂ ಧರ್ಮದ ಆಧ್ಯಾತ್ಮಿಕ ಔನ್ನತ್ಯವನ್ನು ಉಪನಿಷತ್ತುಗಳ ದರ್ಶನವನ್ನು ಎತ್ತಿ ಹಿಡಿದಿದ್ದಾರೆ. ಹೀಗೆ ಹಿಂದೂ ಧರ್ಮದ ದೌರ್ಬಲ್ಯಗಳನ್ನು ಖಂಡಿಸುತ್ತಲೆ ಅದರ ಆಧ್ಯಾತ್ಮಿಕ ಮೌಲ್ಯಗಳನ್ನು ಅಂಗೀಕರಿಸುವ ತಮ್ಮ ಸಾಧಕ ದೃಷ್ಟಿಯನ್ನು ಸ್ಪಷ್ಟಪಡಿಸುತ್ತಲೇ ಬಂದಿದ್ದಾರೆ. ಅದನ್ನು ಜನಸಾಮಾನ್ಯರಾದ ನಾವು ಗೊಂದಲ ಮಾಡಿಕೊಳ್ಳದೆ ಸ್ಪಷ್ಟಪಡಿಸಿಕೊಂಡು, ನಮ್ಮ ವೈಚಾರಿಕ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳಬೇಕು.

ಕುವೆಂಪು ಅವರು ತಮ್ಮ ನೂರಾರು ಕವನಗಳಲ್ಲಿ, ನಾಟಕಗಳಲ್ಲಿ, ಮಹಾಕಾವ್ಯದಲ್ಲಿ ಇತರ ಅನೇಕ ಕೃತಿಗಳಲ್ಲಿ ಸಾರಿದ ಸಂದೇಶವನ್ನು ಹಿಂಡಿ ವಿಶ್ವಮಾನವ ಸಂದೇಶದಲ್ಲಿ ಅಡಕಗೊಳಿಸಿದ್ದಾರೆ. ಈ ವಿಶ್ವಮಾನವ ಸಂದೇಶ ಅವರ ಇಳಿ ವಯಸ್ಸಿನಲ್ಲಿ ಎಂದೋ ಒಂದು ದಿನ ಹೊಳೆದ ಕಲ್ಪನೆಯಲ್ಲ. ಅದು ಅವರ ಜೀವನದ ಉದ್ದಕ್ಕೂ ಸಾಧನೆಯ ಬಲದಿಂದ ಬೆಳೆದು ಬಂದ ಜೀವಂತ ಶಕ್ತಿ.

'ಹಳೆ ಮತದ ಕೊಳೆಯೆಲ್ಲ ಹೊಸ ಮತೀಯ ಹೊಳೆಯಲ್ಲಿ ಕೊಚ್ಚಿ ಹೋಗಲಿ; ಬರಲಿ ವಿಜ್ಞಾನ ಬುದ್ಧಿ' ಎಂದು ಒಂದು ಕಡೆ (ತರುಣರಿರ ಎದ್ದೇಳಿ) ಹೇಳಿದರೆ "ಓ ಬನ್ನಿ! ಸೋದರರೆ, ಬೇಗ ಬನ್ನಿ" ಎಂಬ ಕವನದಲ್ಲಿ ಬರುವ

**'ಆ ಮತದ ಈ ಮತದ ಹಳೆ ಮತದ ಸಹವಾಸ**
**ಸಾಕಿನ್ನು ಸೇರಿರೈ ಮನುಜ ಮತಕೆ ;**
**ಓ ಬನ್ನಿ ಸೋದರರೆ ವಿಶ್ವ ಪಥಕೆ'**

ಎಂಬ ಮಾತುಗಳಲ್ಲಿ ಮನುಜಮತ ಮತ್ತು ವಿಶ್ವಪಥದ ಕಲ್ಪನೆ ೧೯೩೫ರಷ್ಟು ಹಿಂದೆಯೇ ಬಂದಿರುವುದನ್ನು ಗಮನಿಸಬಹುದು.

ಸಮರಸ ಮತ್ತು ಸಮನ್ವಯ ಮನೋಭಾವವನ್ನು ಬೆಳೆಸಿಕೊಂಡವನು ಎಲ್ಲಿಯೇ ಇದ್ದರೂ ಯಾವುದೇ ಕೆಲಸವನ್ನು ಮಾಡುತ್ತಿದ್ದರು ಯಾವ ಚಕ್ರವರ್ತಿಗೂ ಇಲ್ಲದ ಆತ್ಮ ಗೌರವವನ್ನು ಪಡೆಯುತ್ತಾನೆ. ನಮ್ಮ ನಾಗರಿಕತೆ ಬೆಳೆದಂತೆ ನಮ್ಮ ಆಧ್ಯಾತ್ಮಿಕತೆ ಅಥವಾ ಆತ್ಮಶ್ರೀಯೂ ಬೆಳೆಯಬೇಕು. ನಮ್ಮವರು ವಿದ್ಯೆಯನ್ನು ಕುರಿತು 'ಸಾವಿದ್ಯಾಯಾ ವಿಮುಕ್ತಯೆ' ಎಂದು ಹೇಳಿದರು. ನಮ್ಮನ್ನು ಮುಕ್ತರನ್ನಾಗಿ ಮಾಡತಕ್ಕಂತಹದು ಯಾವುದೋ ಅದೇ ವಿದ್ಯೆ. ಲೌಕಿಕ ವಿದ್ಯೆ, ಲೌಕಿಕ ದಾಹದಿಂದ ನಮ್ಮನ್ನು ಮುಕ್ತರನ್ನಾಗಿ ಮಾಡುತ್ತದೆ. ಆಧ್ಯಾತ್ಮಿಕ ವಿದ್ಯೆ, ನಮ್ಮ ಆತ್ಮತೃಷೆಯನ್ನು ಹಿಂಗಿಸುತ್ತದೆ... ಪರಿಪೂರ್ಣತೆಯನ್ನು ಪಡೆಯದ ಮನುಷ್ಯ ಅಸುಖಿಯಾಗುತ್ತಾನೆ.

ಕುವೆಂಪು ಕನ್ನಡ ಸಾರ್ವಕಾಲಿಕ ಸಾಂಸ್ಕೃತಿಕ ಶಕ್ತಿ. ವಿಶ್ವಮಾನವತೆಯನ್ನು ಬದುಕಿನ ಆದರ್ಶವೆಂದುಕೊಂಡೆ ಪ್ರತಿಪಾದಿಸಿದ ಮಹಾಕವಿ, ದಾರ್ಶನಿಕ. ತಮ್ಮ ಬರಹದ ಆರಂಭದಿಂದ ಕೊನೆಯವರೆಗೂ 'ಸಮಾನತೆಯ' ಆಶಯಕ್ಕೆ ಬದ್ಧವಾದ ಚಿಂತನೆಗಳನ್ನು ಈ ನೆಲಕ್ಕೆ ಕೊಡುಗೆ ನೀಡಿದ ಒಬ್ಬ ಸಂತ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃಷಿ ನಡೆಸಿದ ಈ ಮಹಾಕವಿ ತನ್ನ ಕಾಲದ ಮಡಿವಂತಿಕೆಯ ಜಾತಿ ಶ್ರೇಷ್ಠತೆಯ ಅಹಂಕಾರಗಳ ಜ್ಞಾನ ಕೋಟೆಯನ್ನು ಮುರಿದು ತನ್ನತನವನ್ನು ಪ್ರತಿಷ್ಠಾಪಿಸಿಕೊಂಡು ರಾಷ್ಟ್ರಕವಿ ಎನಿಸಿಕೊಂಡ ಇವರು ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ ಬೆಳೆಯುತ್ತಾ ನಾವು ಅಲ್ಪಮಾನವನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು ವಿಶ್ವಮಾನವನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು ಎಂದು ಪ್ರತಿಪಾದಿಸಿರುವುದು ಮೂಲ ಸತ್ಯವಾಗಿದೆ. ಅವರೇ ಹೇಳುವಂತೆ ಆ ಮತದ, ಈ ಮತದ, ಹಳೆ ಮತದ ಸಹವಾಸ ಸಾಕಿನ್ನು, ಸೇರಿರೈ ಮನುಜ ಮತಕ್ಕೆ, ಬನ್ನಿ ಸೋದರರೇ ವಿಶ್ವಪಥಕ್ಕೆ ಎಂದು ಕರೆ ನೀಡಿದ್ದಾರೆ.

ಕುವೆಂಪು ಅವರು ತಮ್ಮ ವೈಚಾರಿಕ ಅಭಿವ್ಯಕ್ತಿಯನ್ನು ಮಂಡಿಸುವಾಗ ಹಳೆಯ ಸಂಸ್ಕೃತಿ, ಸಂಪ್ರದಾಯಗಳನ್ನು ಸಂಪೂರ್ಣವಾಗಿ ತಿರಸ್ಕರಿಸದೆ ಅವುಗಳಿಗೆ ಬೇಕಾದ, ಅಗತ್ಯವಾದ ಮೂಲಭೂತ ಮೌಲ್ಯಗಳನ್ನು ಹೊಸದಾಗಿ ಕಟ್ಟುವುದರ ಮೂಲಕ ವಿಶೇಷವಾದ ಸಂಸ್ಕೃತಿಯನ್ನು ಪ್ರತಿಪಾದಿಸಿದರು. ಜೀವ ವಿರೋಧಿಯಾದ ಮೌಲ್ಯಗಳನ್ನು ಬುಡಮೇಲು ಕಿತ್ತೆಸೆದು ಜೀವಪರ ಧೋರಣೆಯ ಹೊಸ ಮೌಲ್ಯಗಳನ್ನು ಸಾಹಿತ್ಯದಲ್ಲಿ ಪ್ರಕಟಪಡಿಸಿದರು. ಆಧ್ಯಾತ್ಮ ಮತ್ತು ವಿಜ್ಞಾನಗಳ ಎರಡು ವಿಭಿನ್ನ ನೆಲೆಗಳನ್ನು ಅನುಸಂಧಾನಗೊಳಿಸುತ್ತಲೇ ಸತ್ಯಕ್ಕೆ ಮುಖ ಮುಖಿಯಾಗುವ ಬಗೆಯನ್ನು ಕುವೆಂಪು ಅವರ ನಿರಂತರ ಚಿಂತನೆ ಸಾಧಿಸಿತು.

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ – ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ ನಮಗೆ ಇನ್ನೂ ಬೇಕಾದುದು ಆ ಮತ ಈ ಮತ ಅಲ್ಲ, ಮನುಜ ಮತ ಆ ಪಥ ಈ ಪಥ ಅಲ್ಲ, ವಿಶ್ವ ಪಥ. ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಿಲ್ಲ; ಸಮನ್ವಯಗೊಳಿಸುವುದು. ಮತಮತದ ಆಂಶಿಕ ದೃಷ್ಟಿಯಲ್ಲ; ಬೌದ್ಧಿಕ ಪಾರಮಾರ್ಥಿಕ ಎಂಬ ಭಿನ್ನದೃಷ್ಟಿಯಲ್ಲ; ಎಲ್ಲವನ್ನು ಭಾಗವತ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ. ಯಾವ ಭಾವನೆಗಳು ಜಗತ್ತಿನಲ್ಲಿ ಎಲ್ಲ ಮಾನವರಿಗೂ ಅನ್ವಯವಾಗಬಹುದೋ ಅಂತಹ ಭಾವನೆ, ಅಂತಹ ದೃಷ್ಟಿ, ಬರಿಯ ಯಾವುದೋ ಒಂದು ಜಾತಿಗೆ, ಮತಕ್ಕೆ, ಗುಂಪಿಗೆ, ಒಂದು ದೇಶಕ್ಕೆ ಮಾತ್ರ ಅನ್ವಯವಾಗುವುದಿಲ್ಲ. ಸರ್ವಕಾಲಕ್ಕೂ ಅನ್ವಯವಾಗುವ ಇವು ಮೂಲ ಮೌಲ್ಯಗಳು. ಈ ದರ್ಶನವನ್ನೇ 'ವಿಶ್ವಮಾನವ ಗೀತೆ' ಸಾರುತ್ತದೆ.

ಹೀಗೆ ಕುವೆಂಪು ಅವರ ಬಹುಮುಖ ವ್ಯಕ್ತಿತ್ವ ಹಾಗೂ ಸಾಧನೆಯಲ್ಲಿ ಏಕಪ್ರಕಾರವಾದ ಒಂದು ವಿಕಾಸಶೀಲ ವೈಚಾರಿಕತೆಯನ್ನು ಕಾಣುತ್ತೇವೆ. ತನ್ನ ಸುತ್ತಲಿನ ಪರಿಸರವನ್ನು ಮರೆಯದ ವಿಶ್ವಪ್ರಜ್ಞೆಯ ಅವತರಣ ಅವರ ವಿಚಾರಶೀಲತೆಯ ತಳಹದಿ. ಜಾತಿ–ಮತ–ಧರ್ಮಗಳ ಕಟು ವಿಮರ್ಶೆಯ ತಿರಸ್ಕಾರದ ಸಂದರ್ಭದಲ್ಲಿಯೂ ಮಾನವೀಯ ಮೌಲ್ಯಗಳ ಪುರಸ್ಕಾರವನ್ನು ಮರೆಯಲಿಲ್ಲ; ವೈಯಕ್ತಿಕ ಇಷ್ಟ ಅನಿಷ್ಟಗಳಿಂದ ಕೂಡಿದ ನಿಂದೆಯ ಸಂಕುಚಿತತೆಗೆ ಕುಗ್ಗಲಿಲ್ಲ. ಸಮಷ್ಟಿ ಪ್ರಜ್ಞೆಯ ವಿಕಾಸಕ್ಕಾಗಿ ತಮ್ಮ ನಡೆ – ನುಡಿಗಳನ್ನು, ಆಚಾರ – ವಿಚಾರಗಳನ್ನು ಬದುಕು–ಬರಹಗಳನ್ನು ಮೀಸಲಾಗಿಟ್ಟರು. ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ – ಅವರ ವೈಚಾರಿಕತೆಯ ಮಾರ್ಗದರ್ಶಕ ಮಂತ್ರಗಳಾದವು. ಈ ಮಾರ್ಗದಲ್ಲಿ ಅವರ ಮುನ್ನಡೆ ಸಹಜವಾಗಿ ಅವರನ್ನು ವಿಶ್ವಮಾನವ ಸಂದೇಶದತ್ತ ತಂದಿತು. ಅವರು ಅಲ್ಲಿ ಹೇಳುವ ಮನುಜಮತ, ವಿಶ್ವಪಥ, ವಿಜ್ಞಾನದೃಷ್ಟಿ, ವಿಚಾರಬುದ್ಧಿ – ಈ ಮೊದಲಾದುವೆಲ್ಲಾ ತಮ್ಮ ಸಾಧನೆಯ

ಪ್ರಾರಂಭದಿಂದಲೂ ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಹೇಳುತ್ತಲೇ ಬಂದವುಗಳು. ಅವೆಲ್ಲಾ ಒಂದೆಡೆಯಲ್ಲಿ ಸುಸಂಗತವಾಗಿ ಸಮಾವೇಶಗೊಂಡು ವಿಶ್ವಮಾನವ ಸಂದೇಶ ರೂಪುಗೊಂಡಿತು.

ಹೀಗೆ ಮೌಢ್ಯ ವಿರೋಧಿ ನೆಲೆಗಟ್ಟನಲ್ಲಿ ವಿಜ್ಞಾನ ಮತ್ತು ಸಮಾಜವನ್ನು ಸಜ್ಜುಗೊಳಿಸಿ, ಕನ್ನಡದಲ್ಲಿ ವೈಚಾರಿಕ ಆಂದೋಲನ ಪ್ರಾರಂಭಿಸಿ ವಿಶ್ವಮಾನವನಾಗಿ, ವಿಶ್ವಮಾನವ ಸಂದೇಶವನ್ನು ನೀಡಿದ ಕುವೆಂಪು ಅವರು ಕನ್ನಡ ಸಾರಸ್ವತ ಲೋಕದಲ್ಲಿ ಅಜರಾಮರರಾಗಿದ್ದಾರೆ.

ಕುವೆಂಪು ಅವರ ವೈಚಾರಿಕತೆ ಕೃತಿಯಲ್ಲಿ ಅಡಕವಾಗಿರುವ ಯುಗಶಕ್ತಿ, ವೈಚಾರಿಕದೃಷ್ಟಿ, ನಾಡು–ನುಡಿಯ ವರ್ಣನೆ, ಶಿಕ್ಷಣ, ಸರ್ವೋದಯ, ಸರ್ವರಿಗೂ ಸಮಬಾಳು, ವಿಚಾರಕ್ರಾಂತಿ, ಪರಿಸರ ಪ್ರಭೆ, ಮತ–ಧರ್ಮ, ಧರ್ಮ–ಆಧ್ಯಾತ್ಮ ಸಾಹಿತ್ಯ, ವಿಶ್ವಮಾನವ ಹೀಗೆ ಹತ್ತು ಹಲವು ವಿಚಾರಗಳನ್ನು ಕುರಿತು ಇದರಲ್ಲಿ ವಿಶ್ಲೇಷಿಸಿರುವುದು ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರ ಪ್ರತಿಭೆಗೆ ಹಿಡಿದ ಕೈಗನ್ನಡಿಯಾಗಿದೆ. ಹಾಗೆಯೇ ಕುವೆಂಪು ಅವರ ವೈಚಾರಿಕತೆಯನ್ನು ಕುರಿತ ಹತ್ತು ಲೇಖನಗಳನ್ನು ಸಂಪಾದಿಸಿರುವ ಪ್ರೊ. ಎಚ್.ಎಂ. ಚೆನ್ನಯ್ಯ ಅವರ ಶ್ರಮ ಶ್ಲಾಘನೀಯವಾದದ್ದು. ಹೀಗಾಗಿ ಈ ಲೇಖನದ ಎಲ್ಲಾ ಶ್ರೇಯಸ್ಸು ಈ ಇಬ್ಬರು ಮಹನೀಯರಿಗೆ ಸಲ್ಲಬೇಕು. ಹಾಗಾಗಿ ಈ ಕೃತಿಯಲ್ಲಿರುವ ಕುವೆಂಪು ಅವರ ಪ್ರಮುಖ ವೈಚಾರಿಕ ಅಂಶಗಳನ್ನು ಕುರಿತು ಮರುಓದಿಗೆ ಒಳಪಡಿಸಿ ವಿಶ್ಲೇಷಣೆಯೊಂದಿಗೆ ಹಲವಾರು ಮಜಲುಗಳಲ್ಲಿ ಚರ್ಚಿಸಿದ್ದೇನೆ. ಸಹೃದಯರು ಈ ಲೇಖನವನ್ನು ಓದುವ ಮುಖೇನ ಕುವೆಂಪು ಅವರ ತಾತ್ವಿಕ ನಿಲುವುಗಳನ್ನು ಮೈಗೂಡಿಸಿಕೊಂಡು ಜೀವನಪಥದಲ್ಲಿ ಸಮಾಜಮುಖಿಯಾಗಿ ಸಮ ಸಮಾಜದ ಧೋರಣೆಗಳನ್ನು ತಾಳುವುದರ ಮೂಲಕ ವಿಶ್ವಮಾನವನಾದರೆ ನನ್ನ ಶ್ರಮ ಸಾರ್ಥಕವಾಗುತ್ತದೆ.